S.C. 53/2024.

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

## ಸತ್ರ ಮೊಕದ್ದಮೆ ಸಂಖ್ಯೆ: 53/2024.

| | | | |
|---|---|---|---|
| ಹೆಸರು | : | ಸುಲ್ತಾನಸಾಬ ತಹಶೀಲ್ದಾರ | ಫ್ರಾಸಾ-14 |
| ತಂದೆಯ ಹೆಸರು | : | ಬಾವಾಸಾಬ | ಚಾಸಾ-20 |
| ವಯಸ್ಸು | : | 55 ವರ್ಷ | |
| ಉದ್ಯೋಗ | : | ಹೊಟೇಲ್ ವ್ಯಾಪಾರ | |
| ವಾಸಸ್ಥಳ | : | ಕರಡಿ | |

ದಿನಾಂಕಃ 27-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಮೃತ ಬಸವರಾಜ ಹಾಗೂ 2 ನೇ ಆರೋಪಿ ಪರಿಚಯ. ಮೃತ ಬಸವರಾಜ ಹಾಗೂ 2 ನೇ ಆರೋಪಿ ನಮ್ಮ ಮನೆಯಲ್ಲಿ ಬಾಡಿಗೆಯಿಂದ ಇದ್ದರು. ಬಸವರಾಜ ಹೇಗೆ ತೀರಿಕೊಂಡ ಅಂತಾ ನನಗೆ ಗೊತ್ತಿಲ್ಲ. ಪೋಲಿಸರು ಬಾಡಿಗೆ ವಿಷಯದಲ್ಲಿ ನನ್ನನ್ನು ವಿಚಾರಣೆ ಮಾಡಿದ್ದಾರೆ. ಪೋಲಿಸರ ಮುಂದೆ ಘಟನೆ ಬಗ್ಗೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.**

ಮೃತ ಬಸವರಾಜ ಹಾಗೂ 2 ನೇ ಆರೋಪಿ ನಮ್ಮ ಮನೆಯಲ್ಲಿ ಬಾಡಿಗೆ ಇದ್ದಾಗ 1 ನೇ ಆರೋಪಿ ಆಗಾಗ ಮನೆಗೆ ಬಂದು 2 ನೇ ಆರೋಪಿಯೊಂದಿಗೆ ಸಲುಗೆಯಿಂದ ಮಾತನಾಡುತ್ತಿದ್ದ ಎನ್ನುವುದು ನನಗೆ ಗೊತ್ತಿಲ್ಲ. 2 ನೇ ಆರೋಪಿ ತಂದೆ ಹಾಗೂ ಅಣ್ಣ-ತಮ್ಮಂದಿರು 2 ನೇ ಆರೋಪಿಗೆ ಎಚ್ಚರಿಕೆ ನೀಡಿ ಹೋಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

ದಿನಾಂಕಃ 30-04-2024 ರಂದು 2 ನೇ ಆರೋಪಿ ಉಳಿದ ಆರೋಪಿತರೊಂದಿಗೆ ಸೇರಿ ಮೃತ ಬಸವರಾಜನನ್ನು ಕೊಲೆ ಮಾಡಿದ ವಿಚಾರ ಗೊತ್ತಾಗಿ ದಿನಾಂಕಃ 02-05-2024 ರಂದು ಈಗ ಓದಿ ಹೇಳಿದ ನಿಪಿ-27 ರಂತೆ

ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

27-02-2026

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.

**S.C. 53/2024.**

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

**ಸತ್ರ ಮೊಕದ್ದಮೆ ಸಂಖ್ಯೆ: 53/2024.**

| | | | |
|---|---|---|---|
| ಹೆಸರು | : | ಅರವಿಂದ ಈಟಿ | ಪ್ರಾಸಾ-13 |
| ತಂದೆಯ ಹೆಸರು | : | ಮುದಕಪ್ಪ | ಚಾಸಾ-19 |
| ವಯಸ್ಸು | : | 57 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ನಂದವಾಡಗಿ | |

ದಿನಾಂಕಃ 27-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಚಾಸಾ-1 ಹಾಗೂ ಮೃತ ಬಸವರಾಜ ಪರಿಚಯ. ಆರೋಪಿತರು ಪರಿಚಯವಿಲ್ಲ. ನಿಪಿ-3 ನೋಡಿದೆ ಅದರ ಮೇಲಿನ ಸಹಿ ನನ್ನದೇ ಇದ್ದು ಅದನ್ನು ನಿಪಿ-3(ಎ) ಅಂತಾ ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕಃ 30-04-2024 ರಂದು ಠಾಣೆಯಲ್ಲಿ ಮಾಡಿದ್ದೇನೆ. ನನ್ನ ಜೊತೆ ಚಾಸಾ-1 ಹಾಗೂ ಇತರರು ಇದ್ದರು. ಸದರಿ ಪಿರ್ಯಾದಿಯನ್ನು ಪೊಲೀಸರು ಟೈಪ್ ಮಾಡಿದರು, ನಾನು ಚಾಸಾ-1 ಇವರಿಗೆ ಪೊಲೀಸರು ಓದಿ ಹೇಳಲು ಸೂಚಿಸಿದ್ದರಿಂದ ಓದಿ ಹೇಳಿದೆ. ಪೋಲಿಸರು ನನ್ನ ಹೇಳಿಕೆ ಪಡೆದಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.**

ದಿನಾಂಕಃ 03-05-2024 ರಂದು ನನ್ನನ್ನು ಪೊಲೀಸರು ಪುನಃ ಠಾಣೆಗೆ ಕರೆಯಿಸಿ 4 ಜನ ಆರೋಪಿತರನ್ನು ತೋರಿಸಿ ಆರೋಪಿತರೇ ಅನೈತಿಕ ಸಂಬಂಧದ ಹಿನ್ನೆಲೆಯಲ್ಲಿ ಬಸವರಾಜನನ್ನು ಕೊಲೆ ಮಾಡಿದ ವಿಚಾರ ತಿಳಿಸಿದ್ದು ನಾನು ನಿಪಿ-26 ರಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಪಿರ್ಯಾದಿಯನ್ನು ನಾನೇ ಬರೆದಿದ್ದೇನೆ ಎನ್ನುವುದು ಸರಿಯಲ್ಲ.

ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

27-02-2026

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಸಂಚಾರಿ ನ್ಯಾಯಾಲಯ, ಹುನಗುಂದ.

S.C. 53/2024.

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

## ಸತ್ರ ಮೊಕದ್ದಮೆ ಸಂಖ್ಯೆ: 53/2024.

| | | | |
|---|---|---|---|
| ಹೆಸರು | : | ತಿಪ್ಪಣ್ಣ ಕವಟಗಿ | ಫ್ರಾಸಾ-12 |
| ತಂದೆಯ ಹೆಸರು | : | ಈರಣ್ಣ | ಚಾಸಾ-18 |
| ವಯಸ್ಸು | : | 55 ಒ ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಕರಡಿ | |

ದಿನಾಂಕಃ 27-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಮೃತ ಬಸವರಾಜ ನನ್ನ ಅಳಿಯ. ಆರೋಪಿತರು ಪರಿಚಯ. 2 ನೇ ಆರೋಪಿ ಮೃತ ಬಸವರಾಜನ ಹೆಂಡತಿ. ಬಸವರಾಜ ಸಾಯುವ 15 ವರ್ಷ ಪೂರ್ವದಲ್ಲಿ 2 ನೇ ಆರೋಪಿಯೊಂದಿಗೆ ಮದುವೆಯಾಗಿದ್ದು ಅವರಿಗೆ 3 ಜನ ಮಕ್ಕಳಿದ್ದು ಮಾಳಪ್ಪ, ಚಿನ್ನವ್ವ ಹಾಗೂ ಮೇಘವ್ವ ಇರುತ್ತಾರೆ. ಬಸವರಾಜ ಸಾಯುವ ಪೂರ್ವದಲ್ಲಿ ಕರಡಿ ಗ್ರಾಮದಲ್ಲಿ ವಾಸಿಸುತ್ತಿದ್ದ.

ಈಗ 2 ವರ್ಷಗಳ ಹಿಂದೆ ಬೆಳಗ್ಗೆ 11.00 ಗಂಟೆಗೆ ಊರಿನಲ್ಲಿ ಜನರು ಬಸವರಾಜನನ್ನು ನಂದವಾಡಗಿ ಹತ್ತಿರ ದಾರಿಯಲ್ಲಿ ಕೊಲೆ ಮಾಡಿ ಹಾಕಿದ್ದಾರೆ ಎಂದು ಮಾತನಾಡುತ್ತಿದ್ದರು. ನಾನು ಹೋಗಿ ನೋಡಲಾಗಿ ಅವನ ಹಣೆಗೆ ಪೆಟ್ಟಾಗಿತ್ತು ಹಾಗೂ ಸ್ಥಳದಲ್ಲಿ ಅವನ ಬೈಕ್ ಇತ್ತು. ಅವನ ಕೊಲೆ ಹೇಗೆ ಆಯಿತು, ಏಕೆ ಆಯಿತು ಹಾಗೂ ಯಾರು ಕೊಲೆ ಮಾಡಿದ್ದಾರೆ ಅಂತಾ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.**

ದಿನಾಂಕಃ 02-05-2024 ರಂದು ನನ್ನನ್ನು ಹಾಗೂ ಇತರರನ್ನು ಇಳಕಲ್ ಗ್ರಾಮೀಣ ಪೊಲೀಸಠಾಣೆಗೆ ಕರೆಯಿಸಿ ಅಲ್ಲಿ 1 ರಿಂದ 3 ನೇ ಆರೋಪಿತರನ್ನು

ತೋರಿಸಿ ಅವರೇ ಕೊಲೆ ಮಾಡಿದ್ದಾರೆ ಎಂದು ಹೇಳಿದ್ದಾರೆ ಎನ್ನುವುದು ಸರಿಯಲ್ಲ. 2 ನೇ ಆರೋಪಿ 1 ನೇ ಆರೋಪಿಯೊಂದಿಗೆ ಅನೈತಿಕ ಸಂಬಂಧ ಹೊಂದಿದ್ದು ಅದು ಅವಳ ಗಂಡನಿಗೆ ಗೊತ್ತಾದರೆ ತೊಂದರೆ ಆಗುತ್ತದೆ ಎಂದು ತಾವೇ ಕೊಲೆ ಮಾಡಿದ್ದೇವೆ ಎಂದು ಅವರು ಒಪ್ಪಿಕೊಂಡಿದ್ದಾಳೆ ಎನ್ನುವುದು ಸರಿಯಲ್ಲ. ಆರೋಪಿ-1 ರಿಂದ 3 ಇವರು ಬಸವರಾಜ ಮೋಟರ ಸೈಕಲ್ ಮೇಲೆ ಬರುವಾಗ ಮೇದಾರ ಹಳ್ಳಕ್ಕೆ ಅಡ್ಡಗಟ್ಟಿ ಬಡಿಗೆಯಿಂದ ಹೊಡೆದು ಕೊಲೆ ಮಾಡಿದ್ದಾರೆ ಎಂದು ಗೊತ್ತಾಯಿತು ಎನ್ನುವುದು ಸರಿಯಲ್ಲ.

ದಿನಾಂಕಃ 03-05-2024 ರಂದು ಈಗ ಓದಿ ಹೇಳಿದಂತೆ ನಿಪಿ-24 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ.

ದಿನಾಂಕಃ 03-05-2024 ರಂದು 3 ನೇ ಆರೋಪಿಯನ್ನು ನನಗೆ ಠಾಣೆಯಲ್ಲಿ ತೋರಿಸಿ ಅವನೂ ಸಹ ಕೊಲೆಯಲ್ಲಿ ಭಾಗಿಯಾಗಿದ್ದಾನೆ ಎಂದು ತೋರಿಸಿದರು ಎನ್ನುವುದು ಸರಿಯಲ್ಲ. ಅದೇ ದಿನ ಈಗ ಓದಿ ಹೇಳಿದಂತೆ ನಿಪಿ-25 ರಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

27-02-2026

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.